ಮಧುರಾತಿ ಮಧುರ ನಾದವನ್ನು ಹೊಮ್ಮಿಸುವ ತಂತಿವಾದ್ಯ ಸಾರಂಗಿಯನ್ನು ಸುಮಾರು ನಾಲ್ಕು ದಶಕಗಳಿಂದ ನುಡಿಸುತ್ತಾ ಬಂದಿರುವ ಘನ ವಿದ್ವಾಂಸ ಉಸ್ತಾದ್ ಫಯಾಜ್ ಖಾನ್. ಸಾರಂಗಿ ನುಡಿಸಾಣಿಕೆಯ ಜೊತೆಗೆ ಹಾಡುಗಾರಿಕೆ, ತಬಲಾಗಳಲ್ಲೂ ಪಾಂಡಿತ್ಯ ಸಾಧಿಸಿರುವ ಉಸ್ತಾದ್‌ಜಿ ವಿಶ್ವವೇದಿಕೆಗಳಲ್ಲಿ ಸಾರಂಗಿಯ ಸುನಾದವನ್ನು ಅನುರಣಿಸಿದ ಅಪರೂಪದ ಸಾಧಕ. ಸಂಗೀತಗಾರರ ವಂಶದಲ್ಲೇ ಬೆಳೆದು ಬಂದ ಫಯಾಜ್‌ಖಾನ್ ಅವರ ಅಜ್ಜ ಮೈಸೂರು ರಾಜರ ಆಸ್ಥಾನದಲ್ಲಿ ವಿದ್ವಾಂಸರು. ತಂದೆಯೂ ಉತ್ತಮ ಗಾಯಕ ಹಾಗೂ ಸಾರಂಗಿ ವಾದಕರು. ಮೊದಲಿಗೆ ಫಯಾಜ್ ಅವರ ಒಲವು ಇದ್ದದ್ದು ತಬಲಾ ವಾದನದ ಕಡೆಗೆ. ಧಾರವಾಡದಲ್ಲಿ ತಬಲಾ ವಿದ್ವಾಂಸರಾದ ಪಂ. ಬಸವರಾಜ ಬೆಂಡಿಗೇರಿ ಅವರ ಬಳಿ ತಬಲಾ ನುಡಿಸಾಣಿಕೆ ಕಲಿತರು. ತಬಲಾದ ಬಳಿಕ ಸಂಗೀತಯಾನ ಸಾರಂಗಿಯತ್ತ ಹೊರಳಿತು. ತಂದೆಯವರ ಬಳಿ ಸಾರಂಗಿ ಕಲಿತ ಬಳಿಕ ಮುಂಬಯಿಯಲ್ಲಿ ಪಂ. ರಾಮನಾರಾಯಣ್ ಅವರ ಬಳಿ ಗುರುಕುಲ ಪದ್ಧತಿಯಲ್ಲಿ ಆರು ವರ್ಷಗಳ ಕಾಲ ಸಾರಂಗಿ ವಾದನ ಕಲಿತರು. ಪಾಟಿಯಾಲ ಘರಾಣದ ಉಸ್ತಾದ್ ಅಲ್ತಾಫ್ ಹುಸೇನ್ ಖಾನ್ ಅವರಿಂದ ಗಾಯನ ಕಲಿತರು. ಹೀಗೆ ಮೂರು ವಿದ್ಯೆಗಳಲ್ಲಿ ವಿದ್ವತ್ ಸಾಧಿಸಿದ ಫಯಾಜ್ ಖಾನ್‌ರೊಂದಿಗಿನ ಮಾತುಕತೆಯ ಆಯ್ದ ಭಾಗ ಇಲ್ಲಿದೆ.

◆ **ಸಾರಂಗಿ ವಾದನದಲ್ಲಿ, ಹಿಂದೂಸ್ತಾನಿ ಶಾಸ್ತ್ರೀಯ ಗಾಯನದಲ್ಲಿ ಪರಿಣತರಾದ ನೀವು ಪರಂಪರೆಯ ದಾಸ ಸಾಹಿತ್ಯದಲ್ಲಿ ಸಾಕಷ್ಟು ಕೃಷಿ ಮಾಡಿದ್ದೀರಿ. ದಾಸರ ಪದಗಳಿಗೆ ಸ್ವರಮಟ್ಟುಗಳನ್ನು ಹಾಕಿದ್ದೀರಿ. ರಾಗ ಸಂಯೋಜನೆಯನ್ನೂ ವಿಭಿನ್ನವಾಗಿ ಮಾಡಿದ್ದೀರಿ. ನಿಮಗೆ ದಾಸ ಸಾಹಿತ್ಯದಲ್ಲಿ ಇಷ್ಟೊಂದು ಒಲವು ಮೂಡಿದ್ದು ಹೇಗೆ?**

ಕನ್ನಡ ಭಾಷೆ ನನಗೆ ಬಹಳ ಪ್ರಿಯವಾದ ಭಾಷೆ. ಬಾಲ್ಯದಿಂದಲೂ ದಾಸರ ಪದ ಕೇಳುತ್ತಾ ಬೆಳೆದವನು ನಾನು. ಕೆಲವೊಂದು ದಾಸವಾಣಿ ಕೇಳಿದಾಗ ಇದಕ್ಕೆ ರಾಗ ಸಂಯೋಜನೆಯಾಗಿರುವ ಸ್ವರಗಳು ಅಷ್ಟೊಂದು ಸೂಕ್ತವಲ್ಲ ಅನಿಸಿತು. ದಾಸ ಸಾಹಿತ್ಯ ಕೇಳುಗರ ಅಂತರಾತ್ಮ ತಲುಪಬೇಕು. ಸಂಗೀತ–ಸಾಹಿತ್ಯ ಕೇಳುಗರ ಹೃದಯ ತಟ್ಟಬೇಕು. ಹೀಗಾಗಿ ದಾಸರ ಪದಗಳಾದ 'ಬಾಗಿಲನು ತೆರೆದು ಸೇವೆಯನು ಕೊಡು ಹರಿಯೆ', 'ನಾನಿನ್ನ ಧ್ಯಾನದೊಳಿರಲು', 'ಬಾರಯ್ಯ ರಂಗ ಬಾರಯ್ಯ ಕೃಷ್ಣ', 'ಕಲಿಯುಗದಲಿ ಹರಿನಾಮವ ನೆನೆದರೆ', 'ಏನು ಬೇಡಲಿ ನಿನ್ನ', 'ಕರುಣಿಸೊ ರಂಗ...' ಹೀಗೆ ದಾಸರ ಪದಗಳಿಗೆ ನಾನೇ ಸ್ವರಸಂಯೋಜನೆ ಮಾಡಿ ಹಾಡಿದ್ದೇನೆ. ಎಲ್ಲೇ ಕಛೇರಿಗೆ ಹೋದ್ರೂ ಜನ ಇವನ್ನು ಕೇಳ್ತಾರೆ. ಕೇಳುಗರ ಮನಸ್ಸಿಗೆ ನಾಟುತ್ತದೆ. ಕಛೇರಿ ಆದ್ಮೇಲೆ ಜನರ ಕಣ್ಣುಗಳಲ್ಲಿ ಭಾವನಾತ್ಮಕತೆ ಗುರುತಿಸಿದ್ದೇನೆ. ಕೆಲವರಂತೂ ಅಳೋದು, ತಬ್ಬಿಕೊಳ್ಳೋದು, ಕಾಲು ಮುಟ್ಟಿ ನಮಸ್ಕಾರ ಮಾಡೋದು ಮಾಡ್ತಾರೆ. ಆಗ ನಾನು ದಾಸ ಸಾಹಿತ್ಯಕ್ಕೆ ಮಾಡಿದ ಪ್ರಾಮಾಣಿಕ ಪ್ರಯತ್ನ ಫಲಕಂಡಿತು ಎಂದು ನಾನೂ ಪುಳಕಗೊಳ್ಳುತ್ತೇನೆ.